ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
ಜ್ಞಾನಸಾಗರ, ಬಳ್ಳಾರಿ 583105

# 2020–21 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಆನ್‌ಲೈನ್ ಪ್ರವೇಶಾತಿ ಮಾರ್ಗಸೂಚಿಗಳು

1. ಎಲ್ಲಾ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ **ಕೇವಲ ಆನ್‌ಲೈನ್** ಮೂಲಕ ಮಾತ್ರ ಪ್ರವೇಶಾತಿ ಇರುತ್ತದೆ.
2. ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ವಿವಿಧ ವಿಭಾಗ/ಸಂಯೋಜಿತ ಕಾಲೇಜುಗಳಲ್ಲಿ ನೀಡಲಾಗುವ ವಿವಿಧ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು ಆದರೆ ಪ್ರತಿಯೊಂದು ಕೋರ್ಸ್‌ಗೆ ಪ್ರತ್ಯೇಕ ಅರ್ಜಿ ಸಂಸ್ಕರಣಾ ಶುಲ್ಕವನ್ನು ಪಾವತಿಸಬೇಕು.
3. ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯದ ಜಾಲತಾಣ www.vskub.ac.in ಸಂಪರ್ಕಿಸಬೇಕು. ಜಾಲತಾಣದ ಮುಖಪುಟದಲ್ಲಿರುವ Admission 2020-21 ಕ್ಲಿಕ್ ಮಾಡಿದರೆ Admission Portal ಹಾಗೂ ಪ್ರವೇಶಾತಿಗೆ ಸಂಬಂಧಿಸಿದ ಇನ್ನಿತರ ಮಾಹಿತಿಗಳು ದೊರೆಯುತ್ತವೆ.
4. Admission Portal ಗೆ ಭೇಟಿ ನೀಡಿದ ತಕ್ಷಣ whatsApp ಸಂಪರ್ಕ ಹೊಂದಿರುವ ವೈಯಕ್ತಿಕ ಮೊಬೈಲ್ ದೂರವಾಣಿ ಸಂಖ್ಯೆಯನ್ನು ನಮೂದಿಸಿ ನೋಂದಣಿ ಮಾಡಿಕೊಳ್ಳಬೇಕು.
5. ಮೇಲಿನ ಮಾಹಿತಿಯನ್ನು ಸಲ್ಲಿಸಿದ ತಕ್ಷಣ ನೋಂದಾಯಿತ ಮೊಬೈಲ್ ದೂರವಾಣಿಗೆ ದೃಢೀಕರಣಕ್ಕಾಗಿ ಒಂದೇ ಸಲ ಉಪಯೋಗಿಸಬಹುದಾದ ಗೌಪ್ಯ ಸಂಖ್ಯೆ (O.T.P)ಯನ್ನು ಕಳುಹಿಸಲಾಗುತ್ತದೆ.
6. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ/10 ನೇ ತರಗತಿಯ ಅಂಕಪಟ್ಟಿಯಲ್ಲಿ ನಮೂದಿಸಿರುವಂತೆ ತನ್ನ ಹೆಸರು ಮತ್ತು ಜನ್ಮ ದಿನಾಂಕ, ಮಿಂಚಂಚೆ ವಿಳಾಸ(Email ID), OTP ನೀಡಿ ಸಂಕೇತ ಪದವನ್ನು set ಮಾಡಿಕೊಂಡು ಸಲ್ಲಿಸುವುದು. ಗೌಪ್ಯ ಸಂಕೇತ ಪದವನ್ನು ಯಾರೊಂದಿಗೂ ಹಂಚಿಕೊಳ್ಳಬಾರದು.
7. ಆನ್‌ಲೈನ್ ನೋಂದಾವಣಿಯ ಪ್ರಕ್ರಿಯೆ ಯಶಸ್ವಿಯಾದ ನಂತರ Admission Portal ನ Sign up ಪುಟಕ್ಕೆ ಹೋಗಬಹುದು.
8. ಯಶಸ್ವಿಯಾಗಿ Admission Portal ಗೆ ಪ್ರವೇಶಿಸಿದ ತಕ್ಷಣ ಮುಖಪುಟ ಗೋಚರಿಸುತ್ತದೆ.
9. ಮಾಹಿತಿಯನ್ನು ತುಂಬಲು "ಪ್ರವೇಶಾತಿ ಅರ್ಜಿ" ಯ ಮೇಲೆ ಕ್ಲಿಕ್ ಮಾಡುವುದು. ಪ್ರವೇಶಾತಿ ಅರ್ಜಿಯಲ್ಲಿ ಅಭ್ಯರ್ಥಿಯ ವೈಯಕ್ತಿಕ ಹಾಗೂ ಶೈಕ್ಷಣಿಕ ಮಾಹಿತಿಗಳನ್ನು ತುಂಬಬೇಕು. ಪ್ರವೇಶಾತಿ ಅರ್ಜಿಯು ಈ ಕೆಳಕಂಡ ವಿಭಾಗಗಳನ್ನು ಹೊಂದಿರುತ್ತದೆ.
    - ಭಾವಚಿತ್ರ ಅಪ್‌ಲೋಡ್ ಮಾಡಲು ಸ್ಥಳವಕಾಶವಿರುವ ವೈಯಕ್ತಿಕ ಮಾಹಿತಿಗಳು
    - ಸಂಪರ್ಕ ಮಾಹಿತಿಗಳು

- ಮೀಸಲಾತಿ ವಿವರಗಳು
- ಅರ್ಹತಾ ಪರೀಕ್ಷಾ ಮಾಹಿತಿಗಳು
- ಪ್ರವೇಶ ಬಯಸುವ ಕೋರ್ಸ್‌ಗಳು
- ಪರಿಶೀಲನೆಗಾಗಿ ಮೂಲ ದಾಖಲಾತಿಗಳ ಪ್ರತಿಗಳನ್ನು ಅಪ್‌ಲೋಡ್ ಮಾಡುವುದು.

10. ಅರ್ಜಿಯನ್ನು ತುಂಬುವ ಸಮಯದಲ್ಲಿ ನೀವು ಒದಗಿಸಿದ ಮಾಹಿತಿಯು ವ್ಯರ್ಥವಾಗದಿರಲು, ಮಾಹಿತಿಯನ್ನು ಒದಗಿಸುವ ಸಂದರ್ಭದಲ್ಲಿ ಆಗಾಗ Save ಮಾಡಿ ಮುಂದುವರೆಯಿರಿ. ಅಭ್ಯರ್ಥಿಯು ಅರ್ಜಿಯನ್ನು ಪೂರ್ಣಗೊಳಿಸಿ ಭಾವಚಿತ್ರವನ್ನು, ಅಪ್‌ಲೋಡ್ ಮಾಡಿದ ನಂತರ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಯನ್ನು ಸಲ್ಲಿಸಿದ ನಂತರ ನಮೂದಿಸಿರುವ ದತ್ತಾಂಶಗಳ ಬದಲಾವಣೆಗೆ ಅವಕಾಶವಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ನೀವು ಒದಗಿಸಿರುವ ಮಾಹಿತಿಯು ಸರಿಯಾಗಿದೆಯೆ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಬಹಳ ಜಾಗ್ರತೆಯಿಂದ ಪರಿಶೀಲಿಸಿ ಅಂತಿಮವಾಗಿ ಅರ್ಜಿ ಸಲ್ಲಿಸುವುದು. ಅರ್ಜಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ ಅರ್ಜಿ ಸಂಖ್ಯೆಯೊಂದನ್ನು ನೀಡಲಾಗುವುದು. ಈ ಸಂಖ್ಯೆಯನ್ನು ವಿಶ್ವವಿದ್ಯಾಲಯದೊಂದಿಗೆ ಮುಂದಿನ ವಿವಿಧ ಕಾರ್ಯ ಚಟುವಟಿಕೆಗಳಿಗಾಗಿ ಕಾಯ್ದಿಟ್ಟುಕೊಳ್ಳಬೇಕು.
11. ಪ್ರವೇಶ ಬಯಸುವ ಅಭ್ಯರ್ಥಿಯು ತಮಗೆ ಬೇಕಾದ ಕೋರ್ಸ್‌ಗಳನ್ನು ಆಯ್ದುಕೊಳ್ಳಬೇಕು. ಪ್ರತಿಯೊಂದು ಕೊರ್ಸ್‌ಗೆ ಪ್ರತ್ಯೇಕ ಅರ್ಜಿ ಸಂಸ್ಕರಣ ಶುಲ್ಕ ಪಾವತಿಸಬೇಕು. ಪ್ರತಿಯೊಂದು ಕೊರ್ಸ್‌ಗೆ ಅರ್ಜಿ ಸಂಸ್ಕರಣ ಶುಲ್ಕ OBC/GM ಅಭ್ಯರ್ಥಿಗಳಿಗೆ ರೂ. 300 ಹಾಗೂ SC/ST/Category-I ಅಭ್ಯರ್ಥಿಗಳಿಗೆ ರೂ.150ಗಳನ್ನು ಪಾವತಿಸಬೇಕು.
12. ಪಾವತಿಸಿದ ಅರ್ಜಿ ಸಂಸ್ಕರಣ ಶುಲ್ಕ ಅಥವಾ ಪ್ರವೇಶಾತಿ ಶುಲ್ಕವನ್ನು ಯಾವುದೇ ಕಾರಣಕ್ಕೆ ಹಿಂದಿರಿಗಿಸುವುದಿಲ್ಲ ಮತ್ತು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.
13. ಅಂತಿಮ ಸಲ್ಲಿಕೆಯಲ್ಲಿ ಅಭ್ಯರ್ಥಿಗಳು ತಮ್ಮ ಆಯ್ಕೆಯನ್ನು ನಮೂದಿಸಬೇಕು.
14. ಆಯ್ಕೆ ನಮೂದಿಸುವಿಕೆಯು ಒಂದು ಪ್ರಕ್ರಿಯೆಯಾಗಿದ್ದು, ಅದರಲ್ಲಿ ಪಟ್ಟಿಯಲ್ಲಿ ಲಭ್ಯವಿರುವ ಕೋರ್ಸ್ ಹಾಗೂ ವಿಭಾಗ/ಕಾಲೇಜುಗಳನ್ನು ಆದ್ಯತೆಯನುಸಾರ ಆಯ್ಕೆ ಮಾಡಬೇಕು. ಅಭ್ಯರ್ಥಿ ನಮೂದಿಸಿರುವ ಆಯ್ಕೆಯನ್ವಯ ಗಣಕಯಂತ್ರವೇ ಮೆರಿಟ್ ಆಧಾರದಲ್ಲಿ ಸ್ಥಾನಗಳನ್ನು ನೀಡುತ್ತದೆ. ಆಯ್ಕೆಯನ್ನು ನಮೂದಿಸುವ ಮಾದರಿಯ ಈ ಕೆಳಗಿನಂತೆ ಇರುತ್ತದೆ.

| **ಪ್ರೋಗ್ರಾಂ/ಕೋರ್ಸ್** | **ವಿಭಾಗ/ಕಾಲೇಜು** | **ಆಯ್ಕೆಯ ಆದ್ಯತೆ (1–15)** |
|---|---|---|
| | | |

15. ಪ್ರಥಮ ಸುತ್ತಿನ ಸೀಟು ಹಂಚಿಕೆಯ ಮುನ್ನ ಆಯ್ಕೆ ಬದಲಾವಣೆ ಮಾಡಿಕೊಳ್ಳುವ ಅವಕಾಶವನ್ನು ಸ್ಥಗಿತಗೊಳಿಸಲಾಗುತ್ತದೆ.
16. ಆಯ್ಕೆಯನ್ನು ನಮೂದಿಸಿದ ನಂತರ, ಲಭ್ಯವಿರುವ ಪಾವತಿ ದ್ವಾರ (Payment Gateway)ದ ಮೂಲಕ ಅರ್ಜಿ ಸಂಸ್ಕರಣ ಶುಲ್ಕವನ್ನು ಪಾವತಿಸಬೇಕು. ಶುಲ್ಕ ಪಾವತಿಸಲು ಹಲವಾರು ಪಾವತಿ ದ್ವಾರಗಳನ್ನು ಕಲ್ಪಿಸಲಾಗಿದೆ. ಅರ್ಜಿ ಶುಲ್ಕ ಯಶಸ್ವಿಯಾಗಿ ಪಾವತಿಸಿದ ನಂತರ ಭರ್ತಿ ಮಾಡಿದ ಅರ್ಜಿಯನ್ನು Generate ಮಾಡಲಾಗುವುದು.

17. ಅಭ್ಯರ್ಥಿಯು ಮುದ್ರಿತ ಅರ್ಜಿಯನ್ನು ಮೂಲ ದಾಖಲಾತಿಗಳ ಪರಿಶೀಲನೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು. ಮುದ್ರಿತ ಅರ್ಜಿಗಳನ್ನು ಸಲ್ಲಿಸದಿದ್ದಲ್ಲಿ ಮತ್ತು ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಿಸಿಕೊಳ್ಳುವಲ್ಲಿ ವಿಫಲವಾದರೆ ಅಂತಹ ಅಭ್ಯರ್ಥಿಯ ಅರ್ಜಿಯನ್ನು ಪ್ರವೇಶಾತಿಗಾಗಿ ಪರಿಗಣಿಸುವುದಿಲ್ಲ. ಅಭ್ಯರ್ಥಿಯು ಈ ಕೆಳಗಿನ ಯಾವುದಾದರು ಕೇಂದ್ರದಲ್ಲಿ ಮೂಲ ದಾಖಲಾತಿಗಳ ಪರಿಶೀಲನೆ ಮಾಡಿಸಿಕೊಳ್ಳಬಹುದು.

    ಎ. ಬಳ್ಳಾರಿ – ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಸಂಬಂಧಿತ ವಿಭಾಗ

    ಬಿ. ಕೊಪ್ಪಳ – ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ.

    ಸಿ. ಕೊಟ್ಟೂರು – ಕೊಟ್ಟೂರೇಶ್ವರ ಪದವಿ ಮಹಾವಿದ್ಯಾಲಯ

18. ಶುಲ್ಕ ಪಾವತಿಸಿದ ಅಭ್ಯರ್ಥಿಗಳು ಭರ್ತಿಮಾಡಿದ ಅರ್ಜಿಯನ್ನು ಪುನಃ ಮುದ್ರಿಸಿಕೊಳ್ಳಬಹುದಾಗಿದೆ.
19. **ಅಣುಕು ಸೀಟು ಹಂಚಿಕೆ**

ನಮೂದಿಸಿರುವ ಆಯ್ಕೆಯನ್ವಯ, ಅಣಕು ಸೀಟು ಹಂಚಿಕೆಯನ್ನು ಮಾಡಿ, ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು. **ಇದು ನಿಜವಾದ ಆಯ್ಕೆಯಾಗಿರುವುದಿಲ್ಲ.** ಆಯ್ಕೆಮಾಡಿದ ಕೋರ್ಸ್ ಮತ್ತು ವಿಭಾಗ/ಕಾಲೇಜು ದೊರೆಯುವ ಸಂಭವನೀಯತೆಯನ್ನು ಕುರಿತು ಮಾಹಿತಿ ಒದಗಿಸುತ್ತದೆ. ಅಣಕು ಸೀಟ್ ಹಂಚಿಕೆಯ ಆಧಾರದನ್ವಯ ಅಭ್ಯರ್ಥಿಯು ಈಗಾಗಲೇ ನಮೂದಿಸಿರುವ ಹಾಗೂ ವಿಭಾಗ/ಕಾಲೇಜುಗಳು ಆದ್ಯತೆಯನ್ನು ಬದಲಾಯಿಸಬಹುದಾಗಿದೆ. ಇದರ ನಂತರ ಬದಲಾವಣೆಗೆ ಅವಕಾಶವಿರುವುದಿಲ್ಲ.

**ಅಣಕು ಸೀಟ್ ಹಂಚಿಕೆಯ ಕುರಿತು ಒಂದು ಟಿಪ್ಪಣಿ:**

ಕೋರ್ಸ್ ಹಾಗೂ ವಿಭಾಗ/ಕಾಲೇಜುಗಳ ಆಯ್ಕೆಗಳನ್ನು ನಮೂದಿಸಿದ ನಂತರ, ನಿಜವಾದ ದತ್ತಾಂಶಗಳ ಆಧಾರದನ್ವಯ ಸೀಟು ಹಂಚಿಕೆಯನ್ನು ಮಾಡಿ, ವಾಸ್ತವಾಂಶವನ್ನು ವಿಶ್ವವಿದ್ಯಾಲಯದ ಜಾಲತಾಣ (www.vskub.ac.in) ಹಾಗೂ Candidate Portal ಗಳಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಯು ಸ್ಥಾನ ಹಂಚಿಕೆಯ ಸಾಧ್ಯತೆಯನ್ನು ಪರಿಶೀಲಿಸಬೇಕು. ಕೋರ್ಸ್ ಮತ್ತು ವಿಭಾಗ/ಕಾಲೇಜುಗಳ ಹಂಚಿಕೆಯನ್ನು ತಿಳಿದುಕೊಂಡು, ಇಚ್ಛಿಸಿದಲ್ಲಿ ಅಭ್ಯರ್ಥಿಯು ನಿಗದಿತ ಸಮಯದಲ್ಲಿ ಆಯ್ಕೆಯಲ್ಲಿ ಮಾರ್ಪಾಡು ಮಾಡಿಕೊಳ್ಳಬಹುದು. ಮಾರ್ಪಾಡು ಮಾಡಿದ ಆಯ್ಕೆ–ಆದ್ಯತೆಯನ್ವಯ ನಿಜವಾದ ಸೀಟು ಹಂಚಿಕೆಯನ್ನು ಮಾಡಲಾಗುವುದು.

**ಅಣುಕು ಸ್ಥಾನಗಳ ಹಂಚಿಕೆಯನ್ನು ಏಕೆ ಮಾಡಲಾಗುತ್ತದೆ?**

ನಮೂದಿಸಿದ ಆಯ್ಕೆ – ಆದ್ಯತೆಯನ್ವಯ ಸೀಟು ಹಂಚಿಕೆಯ ಮಾಹಿತಿ ದೊರೆಯುತ್ತದೆ. ಆಯ್ಕೆಯನ್ನು ಬದಲಾಯಿಸಲು ಅಥವಾ ನಮೂದಿಸಿದ ಆಯ್ಕೆಗಳನ್ನು ಹಾಗೆಯೇ ಉಳಿಸಿಕೊಳ್ಳಲು ಅಭ್ಯರ್ಥಿಗೆ ಮನವರಿಕೆ ಮಾಡಿಕೊಡುತ್ತದೆ. ಅಭ್ಯರ್ಥಿಯು ತಾನು ಆಯ್ಕೆಯನ್ನು ನಮೂದಿಸದೇ ಇರುವುದರಿಂದ ತನಗಿಂತ ಕಡಿಮೆ ಅಂಕಗಳನ್ನು ಪಡೆದ ಬೇರೆ ಅಭ್ಯರ್ಥಿಗೆ ಸೀಟು ಹಂಚಿಕೆಯಾಗಿರಬಹುದು. ಹೀಗಾಗಿ ಅಭ್ಯರ್ಥಿಗಳಿಗೆ ಆಯ್ಕೆಯನ್ನು ಬದಲಾಯಿಸಲು, ತೆಗೆದುಹಾಕಲು ಅಥವಾ ಸೇರಿಸಲು ಮತ್ತೊಂದು ಅವಕಾಶವನ್ನು ನೀಡಲಾಗುತ್ತದೆ. **ಅಣಕು ಸೀಟು ಹಂಚಿಕೆಯ ನಂತರ ಆಯ್ಕೆ–ಆದ್ಯತೆಗಳು ಬದಲಾವಣೆಗೊಂಡಲ್ಲಿ ನಿಜವಾದ ಸ್ಥಾನ ಹಂಚಿಕೆ ಮಾಡಿದಾಗ ಅಣಕು ಹಂಚಿಕೆಯಲ್ಲಿ ನೀಡಿದ ಸೀಟು ದೊರೆಯದೇ ಇರಬಹುದು.**

20. ಆದ್ಯತೆಯ ಆಯ್ಕೆ ಅಥವಾ ಅದರ ಬದಲಾವಣೆಯ ನಂತರ, ಪ್ರಥಮ ಸುತ್ತಿನ ಸೀಟು ಹಂಚಿಕೆಯನ್ನು ಮಾಡಿ ಪಟ್ಟಿಯನ್ನು ಪ್ರಕಟಿಸಲಾಗುವುದು. ಈ ಕೆಳಗೆ ವಿವರಿಸಿದ ಪ್ರವೇಶಾತಿ ಪ್ರಕ್ರಿಯೆಯು ಎಲ್ಲಾ ಸುತ್ತುಗಳಿಗೆ ಅನ್ವಯಿಸುತ್ತದೆ.

**ಸೀಟು ಹಂಚಿಕೆ ಪ್ರಕ್ರಿಯೆ:** ಕರ್ನಾಟಕ ಸರ್ಕಾರದ 100 ಬಿಂದುಗಳ ಮೀಸಲಾತಿ ನಿಯಮಗಳನ್ವಯ ಕೋರ್ಸ್ ಮತ್ತು ವಿಭಾಗ/ಕಾಲೇಜುವಾರು ಸೀಟು ಹಂಚಿಕೆಯ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿರುವ ಪ್ರವೇಶಾತಿ ಕೈಪಿಡಿಯಲ್ಲಿ ಸೀಟು ಹಂಚಿಕೆಯ ಪಟ್ಟಿಯನ್ನು ವೀಕ್ಷಿಸಬಹುದು. ಆಯ್ಕೆ ನಮೂದಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಮೆರಿಟ್–ಮೀಸಲಾತಿ ಆಧಾರದಲ್ಲಿ ಅಭ್ಯರ್ಥಿಗಳು ನಮೂದಿಸಿರುವ ಆದ್ಯತೆಯನ್ನು ಪರಿಗಣಿಸಿ ಸೀಟು ಹಂಚಿಕೆ ಮಾಡಲಾಗುವುದು. ಒಂದು ವೇಳೆ ಅಭ್ಯರ್ಥಿಗಳ ಶೇಕಡಾ ಅಂಕಗಳು ಸಮಾನವಾಗಿದ್ದಲ್ಲಿ ರ್‍ಯಾಂಕ್ ನಿರ್ಧರಿಸಲು ಅಂತಿಮ ವರ್ಷದ (ಐದು ಮತ್ತು ಆರನೇ ಸೆಮಿಸ್ಟರ್) ಶೇಕಡಾ ಅಂಕಗಳನ್ನು ಪರಿಗಣಿಸಲಾಗುವುದು. ಪುನಃ ಸಮಾನವಾದಲ್ಲಿ ಮೊದಲು ದ್ವಿತೀಯ ವರ್ಷದ (ತೃತೀಯ ಹಾಗೂ ಚತುರ್ಥ ಸೆಮಿಸ್ಟರ್) ನಂತರ, ಅಗತ್ಯವಾದಲ್ಲಿ ಪ್ರಥಮ ವರ್ಷ (ಪ್ರಥಮ ಹಾಗೂ ದ್ವಿತೀಯ ಸೆಮಿಸ್ಟರ್) ಶೇಕಡಾ ಅಂಕಗಳನ್ನು ಪರಿಗಣಿಸಿ ರ್‍ಯಾಂಕ್ ನಿರ್ಧರಿಸಲಾಗುವುದು.

ಮೊದಲು ಅಭ್ಯರ್ಥಿಗಳ ವೈಯಕ್ತಿಕ Categoryಯನ್ನು ಪರಿಗಣಿಸದೆ ಎಲ್ಲಾ ಅಭ್ಯರ್ಥಿಗಳ ಶೇಕಡಾವಾರು ಅಂಕಗಳನ್ನು ಗಣನೆಗೆ ತೆಗೆದುಕೊಂಡು ಅವರು ನಮೂದಿಸಿದ ಆಯ್ಕೆ–ಆದ್ಯತೆಗಳ ಆಧಾರದನ್ವಯ ಸಾಮಾನ್ಯ ವರ್ಗದ ಸೀಟುಗಳನ್ನು ಹಂಚಿಕೆ ಮಾಡಲಾಗುವುದು. ಸಾಮಾನ್ಯ ವರ್ಗದ ಎಲ್ಲಾ ಸೀಟುಗಳು ಮುಗಿದ ನಂತರ ಅಭ್ಯರ್ಥಿಗಳ ವೈಯಕ್ತಿಕ Categoryಯನ್ನು ಪರಿಗಣಿಸಿ ಸಂಬಂಧಿಸಿದ Category ಯಲ್ಲಿ ಶೇಕಡಾವಾರು ಅಂಕಗಳ ಆಧಾರದಲ್ಲಿ ಅವರು ನಮೂದಿಸಿದ ಆಯ್ಕೆ–ಆದ್ಯತೆಗಳಂತೆ ಸೀಟುಗಳ ಹಂಚಿಕೆ ಮಾಡಲಾಗುವುದು.

ಪೋಷಕರು ಮತ್ತು ಹಿರಿಯರೊಂದಿಗೆ ಚರ್ಚಿಸಿ, ಗಂಭೀರವಾಗಿ ಯೋಚಿಸಿ ಆದ್ಯತೆಗಳನ್ನು ಬಹಳ ಜಾಗ್ರತೆಯಿಂದ ನಮೂದಿಸಬೇಕು. ಆಕಸ್ಮಿಕವಾಗಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸದೆ ವಿಭಾಗ/ಕಾಲೇಜಿಗೆ ಆದ್ಯತೆ ನೀಡದಿದ್ದರೆ ಅಥವಾ ಕಡಿಮೆ ಆದ್ಯತೆ ನೀಡಿದ್ದರೆ ಒಂದು ಉತ್ತಮ ವಿಭಾಗ/ಕಾಲೇಜಿನಲ್ಲಿ ಸೀಟು ಕೈತಪ್ಪಿ ಹೋಗಬಹುದು. ಉದಾಹರಣೆಗೆ 'ಅ' ಸಂಸ್ಥೆಯಲ್ಲಿ ಅಧ್ಯಯನ ಮಾಡಲು ಆಸಕ್ತಿ ಇದ್ದು, ತಪ್ಪಾಗಿ ಅಥವಾ ಕಣ್ತಪ್ಪಿನಿಂದ 'ಅ' ಸಂಸ್ಥೆಗೆ ಕಡಿಮೆ ಆದ್ಯತೆ ನೀಡಿ ಮತ್ತೊಂದು ಸಂಸ್ಥೆಗೆ ಹೆಚ್ಚಿನ ಆದ್ಯತೆ ನೀಡಿರಬಹುದು. ಆಗ ಅಭ್ಯರ್ಥಿಯ ಮೆರಿಟ್ ಹಾಗೂ ಆದ್ಯತೆಯನ್ನು ಪರಿಗಣಿಸಿ ಗಣಕಯಂತ್ರ ಸೀಟು ಹಂಚಿಕೆ ಮಾಡುತ್ತದೆ. ಈ ರೀತಿಯಾಗಿ ಸರಿಯಾದ ಆದ್ಯತೆಯನ್ನು ನೀಡದಿರುವುದರಿಂದ ಬಯಸಿದ ಸಂಸ್ಥೆಯಲ್ಲಿ ಸೀಟು ತಪ್ಪಬಹುದು. ಆದ್ದರಿಂದ ಕೋರ್ಸ್ ಮತ್ತು ವಿಭಾಗ/ಕಾಲೇಜುಗಳಿಗೆ ಆದ್ಯತೆ ನೀಡುವಾಗ ತುಂಬಾ ಜಾಗರೂಕರಾಗಿರಬೇಕು.

21. **ಪ್ರವೇಶಾತಿ**

**ಆಯ್ಕೆ–1:** ಹಂಚಿಕೆಯಾದ ಸೀಟಿನಿಂದ ತೃಪ್ತರಾಗಿದ್ದು, ಹಂಚಿಕೆಯಾದ ಕೋರ್ಸ್ ಮತ್ತು ವಿಭಾಗ/ ಕಾಲೇಜಿಗೆ ಸೇರಲು ಬಯಸುತ್ತಿದಲ್ಲಿ, ಪಾವತಿದ್ವಾರದ ಮೂಲಕ (Payment Gateway) ಪ್ರವೇಶಾತಿ ಶುಲ್ಕ ಪಾವತಿಸಿ, ಪ್ರವೇಶಾತಿ ಆದೇಶದ ಪ್ರತಿಯನ್ನು Candidate Portal ನಿಂದ Download ಮಾಡಿಕೊಂಡು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ (ಮುಖ್ಯ) ಆವರಣ, ಬಳ್ಳಾರಿಯಲ್ಲಿ ಸಂಬಂಧಿಸಿದ ವಿಭಾಗಕ್ಕೆ ಪ್ರವೇಶಾತಿ ಆದೇಶದಲ್ಲಿ ನಿಗದಿಪಡಿಸಿದ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು ವರದಿ ಮಾಡಿಕೊಂಡರೆ, ಪ್ರವೇಶಾತಿ ಖಚಿತವಾಗುತ್ತದೆ. ವಿಭಾಗದ ಮುಖ್ಯಸ್ಥರು ಒಂದು ಸ್ವೀಕೃತಿ ಪತ್ರವನ್ನು ನೀಡುತ್ತಾರೆ. **ಆದೇಶ ಪಡೆದ ಅಭ್ಯರ್ಥಿಯು ನಿಗದಿ ಸಮಯದಲ್ಲಿ ಸಂಬಂಧಿಸಿದ ವಿಭಾಗಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ, ಹೆಚ್ಚಿನ ಅವಧಿಯನ್ನು ನೀಡುವುದಿಲ್ಲ ಮತ್ತು ಅಂಥವರ ಪ್ರವೇಶಾತಿಯನ್ನು ರದ್ದುಪಡಿಸಲಾಗುತ್ತದೆ**. ಸದರಿ ಅಭ್ಯರ್ಥಿಗೆ ಪ್ರಸ್ತುತ ಹಂಚಿಕೆಯಿಂದ ಸೀಟಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ಹಾಗೆಯೇ ಮುಂದಿನ ಸುತ್ತುಗಳಲ್ಲಿ ಸೀಟುಗಳ ಹಂಚಿಕೆಯಲ್ಲಿ ಅಂತಹ ಅಭ್ಯರ್ಥಿಗಳನ್ನು ಪರಿಗಣಿಸುವುದಿಲ್ಲ. ಪಾವತಿಸಿದ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ರೀತಿ ಪ್ರವೇಶಾತಿ ರದ್ದಾಗಿರುವ ಸೀಟುಗಳು ಖಾಲಿಯಿರುವ ಸೀಟುಗಳಲ್ಲಿ ಸೇರ್ಪಡೆಯಾಗುತ್ತವೆ.

**ಆಯ್ಕೆ–2:** ಹಂಚಿಕೆಯಾದ ಸೀಟು ತೃಪ್ತಿಯಾಗಿದೆ ಆದರೆ ಮುಂದಿನ ಸುತ್ತಿನ ಪ್ರವೇಶಾತಿಯಲ್ಲಿ ಭಾಗವಹಿಸಲು ಇಚ್ಛಿಸುವ ಅಭ್ಯರ್ಥಿಯು ಪ್ರಥಮ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶಾತಿ ಶುಲ್ಕವನ್ನು ಲಭ್ಯವಿರುವ ಪಾವತಿದ್ವಾರದ ಮೂಲಕ ಪಾವತಿಸಬೇಕು. ಮುಂದಿನ ಸುತ್ತಿನಲ್ಲಿ ಇದಕ್ಕಿಂತ ಉತ್ತಮ ಅವಕಾಶ ದೊರೆತಲ್ಲಿ, ಪ್ರಥಮ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದಾಗುತ್ತದೆ, ಅಥವಾ ಉತ್ತಮ ಅವಕಾಶ ದೊರೆಯದಿದ್ದರೆ, ಈಗಾಗಲೇ ಹಂಚಿಕೆಲಾಗಿರುವ ಸೀಟು ಅಭ್ಯರ್ಥಿಯ ಪರವಾಗಿ ಉಳಿದುಕೊಳ್ಳುತ್ತದೆ.

**ಆಯ್ಕೆ–3:** ಅಭ್ಯರ್ಥಿಗೆ ಹಂಚಿಕೆಯಾದ ಸೀಟಿನಿಂದ ತೃಪ್ತಿಯಾಗಿಲ್ಲ ಆದರೆ ಈಗಾಗಲೇ ನಮೂದಿಸಿರುವ ಆಯ್ಕೆ ಆದ್ಯತೆಗಳೊಂದಿಗೆ ಮುಂದಿನ ಸುತ್ತಿನಲ್ಲಿ ಭಾಗವಹಿಸಲು ಇಚ್ಛಿಸುವ ಅಭ್ಯರ್ಥಿಯು ಹಂಚಿಕೆಯಾದ ಸೀಟನ್ನು ಅಧ್ಯರ್ಪಣ (Surrender) ಮಾಡಬೇಕು ಹಾಗೂ ನಮೂದಿಸಿದ ಆಯ್ಕೆ–ಆದ್ಯತೆಗಳನ್ನು Reordering ಮಾಡಬೇಕು. **ಸೀಟು ಹಂಚಿಕೆಯಿಂದ ಅತೃಪ್ತಗೊಂಡ ಎಲ್ಲಾ ಅಭ್ಯರ್ಥಿಗಳು ಮುಂದಿನ ಸುತ್ತಿನಲ್ಲಿ ಭಾಗವಹಿಸಲು ಬಯಸಿದಲ್ಲಿ ಕಡ್ಡಾಯವಾಗಿ ಇಚ್ಛೆಯನ್ನು ವ್ಯಕ್ತಪಡಿಸಲೇಬೇಕು.**

22. ಅಭ್ಯರ್ಥಿಗೆ ಪ್ರವೇಶಾತಿ ಕುರಿತು ಯಾವುದೇ ಸಮಸ್ಯೆ ಎದುರಾದಲ್ಲಿ ನಿಗದಿತ ಸಮಯದಲ್ಲಿ ಮುಕ್ತವಾಗಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.

**ಪ್ರವೇಶಾತಿಗಾಗಿ ಸಾಮಾನ್ಯ ಮಾರ್ಗಸೂಚಿಗಳು**

01. ವಿಶ್ವವಿದ್ಯಾಲಯ ಅಥವಾ ಸ್ನಾತಕೋತ್ತರ ಕೇಂದ್ರಗಳಲ್ಲಿ ವಿಭಾಗವೆಂದರೆ ಒಂದು ಶೈಕ್ಷಣಿಕ ಘಟಕ ಇದನ್ನು ಅಧ್ಯಯನ ವಿಭಾಗವೆಂದು ಕರೆಯಲಾಗುತ್ತದೆ. ಉದಾಹಣೆಗೆ, ಇಂಗ್ಲಿಷ್ ಅಧ್ಯಯನ ವಿಭಾಗ, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಇತ್ಯಾದಿ. ಆ ವಿಭಾಗ ನಿರ್ದಿಷ್ಟ ವಿಷಯದಲ್ಲಿ ಪರಿಣಿತಿ ಪಡೆದ ಅಧ್ಯಾಪಕರನ್ನು ಒಳಗೊಂಡಿರುತ್ತದೆ. ಇಂತಹ ವಿಭಾಗಗಳು ಸ್ನಾತಕೋತ್ತರ ಪದವಿ ಕೋರ್ಸ್ ಮತ್ತು ಪಿಹೆಚ್.ಡಿ ಪದವಿ ಕೋರ್ಸ್‌ಗಳನ್ನು ನೀಡುತ್ತವೆ.

02. ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಅಧ್ಯಯನಿಸಲು ವಿಶ್ವವಿದ್ಯಾಲಯದ ಸಂಬಂಧಿಸಿದ ವಿಭಾಗ/ಸ್ನಾತಕೋತ್ತರ ಕೇಂದ್ರ/ಸಂಯೋಜಿತ ಕಾಲೇಜುಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ವಿದ್ಯಾಸಂಸ್ಥೆಯನ್ನು ಆಯ್ಕೆ ಮಾಡುವಾಗ ಪೋಷಕರು, ಅಧ್ಯಾಪಕರು, ಹಿರಿಯ ಮಿತ್ರರನ್ನು ಸಂಪರ್ಕಿಸುವುದು; ಆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು ಹಾಗೂ ಶೈಕ್ಷಣಿಕ ವಾತಾವರಣ, ಮುಂದಿನ ಶಿಕ್ಷಣ ಮತ್ತು ಉದ್ಯೋಗಾವಕಾಶಗಳ ಕುರಿತು ಮಾಹಿತಿ ಸಂಗ್ರಹಿಸಿರಿ.

03. ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿರುವ ಮಹಿಳಾ ಕಾಲೇಜುಗಳಲ್ಲಿ ಅಧ್ಯಯನ ಮಾಡಿದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಅಭ್ಯರ್ಥಿಗಳನ್ನು ವಿ.ಎಸ್.ಕೆ ವಿಶ್ವವಿದ್ಯಾಲಯದ ವ್ಯಾಪ್ತಿಯ ವಿದ್ಯಾರ್ಥಿಗಳೆಂದು ಪರಿಗಣಿಸಲಾಗುತ್ತದೆ.

04. ಯಾವುದೇ ವ್ಯಕ್ತಿಗತ/ವೈಯಕ್ತಿಕ ಮಾಹಿತಿ ನೀಡಲಾಗುವುದಿಲ್ಲ. ಪ್ರವೇಶ ಅಧಿಸೂಚನೆಯಿಂದ ಅಂತಿಮ ಪ್ರವೇಶದವರೆಗೆ ಪ್ರವೇಶಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣ/ ಪ್ರವೇಶ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುತ್ತದೆ. ಪ್ರವೇಶಕ್ಕೆ ಸಂಬಂಧಿಸಿದ Updates ಗಳನ್ನು ವಿಶ್ವವಿದ್ಯಾಲಯದ ಜಾಲತಾಣ (www.vskub.ac.in) ಅನ್ನು ನಿಯಮಿತವಾಗಿ ಪರಿಶೀಲಿಸುವ ಜವಾಬ್ದಾರಿ ಅರ್ಜಿದಾರರದಾಗಿರುತ್ತದೆ. ಓದುವ ಕೊರತೆ/ತಪ್ಪು ತಿಳುವಳಿಕೆಯಿಂದ ಸಂಭವಿಸುವ ದೂರುಗಳನ್ನು ಪರಿಗಣಿಸುವುದಿಲ್ಲ.

05. ಸಂಬಂಧಿತ ದಾಖಲೆಗಳನ್ನು ಸಲ್ಲಿಸದಿರುವುದು, ಮೂಲ ದಾಖಲೆಗಳ ಪರಿಶೀಲನೆ ಮಾಡಿಸಿಕೊಳ್ಳದಿರುವುದು, ನಿಗದಿತ ದಿನಾಂಕ ಮತ್ತು ಸಮಯದೊಳಗೆ ಶುಲ್ಕವನ್ನು ಪಾವತಿಸದಿರುವುದು, ಮತ್ತು/ಅಥವಾ ಪ್ರವೇಶಾತಿ ಪಡೆದ ನಂತರ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ (ಮುಖ್ಯ) ಕ್ಯಾಂಪಸ್, ಬಳ್ಳಾರಿಯಲ್ಲಿ ಸಂಬಂಧಿಸಿದ ಅಧ್ಯಯನ ವಿಭಾಗಕ್ಕೆ ವರದಿ ಮಾಡಿಕೊಳ್ಳದಿರುವುದು ಹಾಗೂ ಪ್ರವೇಶಾತಿಗೆ ಸಂಬಂಧಿಸಿದ ಇನ್ನಿತರ ಯಾವುದೇ ಅಗತ್ಯಗಳನ್ನು ಪಾಲಿಸುವಲ್ಲಿ ವಿಫಲರಾದಲ್ಲಿ ಅಭ್ಯರ್ಥಿಯು ತನ್ನ ಪ್ರವೇಶಾತಿ ಹಕ್ಕನ್ನು ಕಳೆದುಕೊಳ್ಳುತ್ತಾನೆ/ಳೆ.

06. ಯಾವುದೇ ಹಂತದಲ್ಲಿ, ಪ್ರವೇಶಾತಿಗೆ ಸಂಬಂಧಿಸಿದ ದಾಖಲೆಗಳು ನಕಲಿ/ನಿಜವಲ್ಲದ ಅಥವಾ ಕಲ್ಪಿತ ಅಥವಾ ಬೇರ್‍ಯಾವುದೇ ರೀತಿಯಲ್ಲಿ ದೋಷಯುಕ್ತವೆಂದು ಕಂಡುಬಂದಲ್ಲಿ, ಅಂಥ ಅಭ್ಯರ್ಥಿಗಳಿಗೆ ಪ್ರವೇಶಾತಿ ನೀಡುವುದಿಲ್ಲ ಅಥವಾ ಅದಾಗಲೇ ಪ್ರವೇಶಾತಿ ಪಡೆದುಕೊಂಡಿದ್ದರೆ, ಯಾವುದೇ ಸೂಚನೆ ನೀಡದೆ ಪಡೆದುಕೊಂಡಿದ್ದರೆ, ಯಾವುದೇ ಸೂಚನೆ ನೀಡದೆ ಪ್ರವೇಶಾತಿಯನ್ನು ರದ್ದುಪಡಿಸಲಾಗುವುದು. ಈ ಅನುಚಿತ ವಿಷಯ ಪದವಿ ಶಿಕ್ಷಣ ಮುಕ್ತಾಯದ ನಂತರ ತಿಳಿದುಬಂದಲ್ಲಿ ಆ ವಿದ್ಯಾರ್ಥಿಯ ಪದವಿಯನ್ನು ರದ್ದುಪಡಿಸಲಾಗುವುದು ಮತ್ತು ಅಂಥಹ ವಿದ್ಯಾರ್ಥಿಯ ವಿರುದ್ಧ ಕಾನೂನಿನ ಕ್ರಮ ಜರುಗಿಸಲಾಗುವುದು.

07.ಒಂದು ವೇಳೆ ಅಭ್ಯರ್ಥಿಯು ಪ್ರವೇಶ ಪಡೆದ ಕೋರ್ಸ್‌ಗೆ ವಿಶ್ವವಿದ್ಯಾಲಯದ ಯಾವುದೇ ಕ್ಯಾಂಪಸ್‌ನಲ್ಲಿ 10 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆದಲ್ಲಿ ಅಂಥಹ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಮುಖ್ಯ ಕ್ಯಾಂಪಸ್ ಅಥವಾ ವಿಶ್ವವಿದ್ಯಾಲಯದ ಬೇರೊಂದು ಸ್ನಾತಕೋತ್ತರ ಕೇಂದ್ರಕ್ಕೆ (ಅದೇ ಕೋರ್ಸ್‌ಗೆ ಅಥವಾ ಸಂಬಂಧಿತ ಕೋರ್ಸ್‌ಗೆ) ವರ್ಗಾಯಿಸಲಾಗುವುದು.

08.ನೋಂದಣಿ ಸಮಯದಲ್ಲಿ ಪಾವತಿಸಿದ ಅರ್ಜಿ ಶುಲ್ಕಗಳು ಮತ್ತು ಪ್ರವೇಶಾತಿ ಸಮಯದಲ್ಲಿ ಪಾವತಿಸಿದ ಪ್ರವೇಶ ಶುಲ್ಕವನ್ನು ಯಾವುದೇ ಸಂದರ್ಭಗಳಲ್ಲಿ ಮರುಪಾವತಿಸಲಾಗುವುದಿಲ್ಲ ಅಥವಾ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.

09.ಪ್ರವೇಶ ಪಡೆದ ಇತರ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಪ್ರವೇಶ ಪಡೆದ ದಿನಾಂಕದಿಂದ 30 ದಿನಗಳೊಳಗೆ ವಲಸೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗುತ್ತದೆ.

10.ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಜ್ಞಾನಸಾಗರ (ಮುಖ್ಯ) ಕ್ಯಾಂಪಸ್‌ನ ವಿಭಾಗಗಳಲ್ಲಿ ಪ್ರವೇಶ ಪಡೆದ ಅಭ್ಯರ್ಥಿಗಳು ವರದಿ ಮಾಡಿಕೊಂಡ ಕೂಡಲೇ ಕ್ಯಾಂಪಸ್‌ನಲ್ಲಿರುವ ವಿದ್ಯಾರ್ಥಿಗಳ ವಸತಿನಿಲಯಗಳಿಗೆ ಅರ್ಜಿ ಸಲ್ಲಿಸಬಹುದು.

11.ಪ್ರವೇಶಾತಿಗೆ ಸಂಬಂಧಿಸಿದ Updateಗಳನ್ನು ಪಡೆಯಲು ವಿಶ್ವವಿದ್ಯಾಲಯದ ಜಾಲತಾಣ (www.vskub.ac.in) ಮತ್ತು ಅಭ್ಯರ್ಥಿಗಳ ಪೋರ್ಟಲ್‌ನ್ನು ಆಗಾಗ ಸಂಪರ್ಕಿಸುತ್ತಿರಬೇಕು. **ಪ್ರಸ್ತುತ ಮಾಹಿತಿಗಳಲ್ಲಿ ಆಗುವ ಬದಲಾವಣೆಗಳನ್ನು ಕಾಲಕಾಲಕ್ಕೆ ವಿಶ್ವವಿದ್ಯಾಲಯದ ಜಾಲತಾಣ/ಅಭ್ಯರ್ಥಿಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.**

12.ಪ್ರವೇಶಾತಿ ಪ್ರಕ್ರಿಯೆ ಸಂಪೂರ್ಣವಾಗಿ ಮುಕ್ತಾಯವಾದ ನಂತರ ತರಗತಿಗಳು ಆರಂಭವಾಗುತ್ತವೆ. ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳಿಗೆ ಶೇಕಡಾ 75 ರಷ್ಟು ಹಾಜರಾತಿಯು ಕಡ್ಡಾಯವಾಗಿರುತ್ತದೆ.